08 ಸಪ್ಟೆಂಬರ್ **2017**

**ದಿ ಇಂಡಿಯನ್ ಮರ್ಕಂಟೈಲ್ ಕೋ-ಅಪರೇಟಿವ್ ಬ್ಯಾಂಕ್ ಲಿಮಿಟೆಡ್, ಲಕ್ನೊ, ಉತ್ತರ ಪ್ರದೇಶ– ಇದಕ್ಕೆ ವಿಧಿಸಿರುವ ನಿರ್ದೇಶನಗಳ ವಿಸ್ತರಣೆ.**

ಭಾರತೀಯ ರಿಜರ್ವ್ ಬ್ಯಾಂಕ್, ದಿ ಇಂಡಿಯನ್ ಮರ್ಕಂಟೈಲ್ ಕೋ-ಅಪರೇಟಿವ್ ಬ್ಯಾಂಕ್ ಲಿಮಿಟೆಡ್, ಲಕ್ನೊ, ಉತ್ತರ ಪ್ರದೇಶ - ಇದಕ್ಕೆ ನೀಡಿದ್ದ ನಿರ್ದೇಶನವನ್ನು ಆರು ತಿಂಗಳುಗಳ ಕಾಲ ಅಂದರೆ 12 ಸಪ್ಟೆಂಬರ್ 2017 ರಿಂದ 11 ಮಾರ್ಚ್ 2018 ರ ವರೆಗೆ ವಿಸ್ತರಿಸಲಾಗಿದೆ (ಪರಿಶೀಲನೆಗೆ ಒಳಪಡುತ್ತದೆ). ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ 1949 ಕಲಂ 35A ರ ಉಪ ಕಲಂ (1) ರ ಅಡಿಯಲ್ಲಿ ಅಧಿಕಾರ ಚಲಾಯಿಸಿ ಭಾರತೀಯ ರಿಸರ್ವ್ ಬ್ಯಾಂಕ್ ಈ ಮಾರ್ಗದರ್ಶನಗಳನ್ನು ವಿಧಿಸಿದೆ. ಮೇಲೆ ತಿಳಿಸಿದ ಬ್ಯಾಂಕು 04 ಜನವರಿ 2014 ರಂದು ನೀಡಿದ ಆದೇಶದ ಪ್ರಕಾರ 12 ಜೂನ್ 2014 ರಿಂದ ಆರ್‌ಬಿಐ ನ ನಿರ್ದೇಶನದಡಿಯಲ್ಲಿತ್ತು.

ಮೇಲೆ ತಿಳಿಸಿದ ನಿರ್ದೇಶನವನ್ನು ಮಾರ್ಪಡಿಸಲಾಗಿತ್ತು ಹಾಗೂ ಅದರ ಸಿಂಧುತ್ವವನ್ನು ಆರ್‌ಬಿಐ ನ ಆದೇಶದ ಪ್ರಕಾರ ಕೆಳಕಂಡ ದಿನಾಂಕಗಳಲ್ಲಿ ವಿಸ್ತರಿಸಲಾಗಿತ್ತು. 30 ಜುಲೈ 2014, 8 ಡಿಸೆಂಬರ್ 2014, 2 ಜೂನ್ 2015, 7 ಸೆಪ್ಟಂಬರ್ 2015, 19 ಅಕ್ಟೋಬರ್ 2015, 07 ಡಿಸೆಂಬರ್ 2015, 04 ಮಾರ್ಚ್ 2016, 02 ಸೆಪ್ಟಂಬರ್ 2016, 25 ನವೆಂಬರ್ 2016 ಮತ್ತು 09 ಮಾರ್ಚ್ 2017.

ನಿರ್ದೇಶನದ ಒಂದು ಪ್ರತಿಯನ್ನು ಬ್ಯಾಂಕ್ ಆವರಣದಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರದರ್ಶಿಸಲಾಗಿದೆ.

**ಅಜಿತ್ ಪ್ರಸಾದ**

**ಪತ್ರಿಕಾ ಪ್ರಕಟಣೆ : 2017-2018/683**

ಸಹಾಯಕ ಸಲಹೆಗಾರರು